ಹುರಿದು ಅಥವಾ ಬೇಯಿಸಿ ತಿನ್ನಬಹುದಾಗಿದೆ. ಹಣ್ಣಿನ ಗಟ್ಟಿಯಾದ ಹೊರಕವಚದೊಳಗೆ ನಾರಿನಿಂದ ಕೂಡಿದ ತಿರುಳಿದೆ. ಅದರೊಳಗೆ ಅಂಡಾಕಾರದ ಬೀಜವೂ ಅವಿತಿದೆ. ಬೀಜದ ಮೇಲ್ಮೈಯಲ್ಲಿ ಸೂಕ್ಷ್ಮ ಮುಳ್ಳುಗಳ ಪದರವಿದ್ದು ಕಾಳಜಿ ವಹಿಸತಕ್ಕದ್ದು.

ಬೀಜದಿಂದ ತಯಾರಿಸಿದ ಎಣ್ಣೆಯನ್ನು ಮತ್ತು ಎಲೆಗಳ ಪೇಸ್ಟನ್ನು ಸಂಧಿವಾತಕ್ಕೆ ಔಷಧಿಯಾಗಿ ಬಳಸುತ್ತಾರೆ. ಕಾಂಡದ ತೊಗಟೆ ಮತ್ತು ಎಲೆಗಳ ಸಾರವನ್ನು ಜಾಂಡೀಸ್ ಮತ್ತು ಲಿವರ್ ತೊಂದರೆಗಳಿಗೆ ಗಿಡಮೂಲಿಕೆಯಾಗಿ ಬಳಸಲಾಗುತ್ತದೆ. ಗಟ್ಟಿಯಾಗಿರುವ ತೊಗಟೆಯ ನಾರನ್ನು, ಮೀನುಗಾರಿಕೆ ನಡೆಸಲು ಬಳಸುವ ಬಲೆಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ನಿತ್ಯಹರಿದ್ವರ್ಣದ ಪಶ್ಚಿಮಘಟ್ಟದ ಕಾಡುಗಳಲ್ಲಿ, ಪೂರ್ವೋತ್ತರ ಭಾರತ ಹಾಗೂ ಅಂಡಮಾನ್ ನಿಕೋಬಾರ್‌ಗಳಲ್ಲಿ ಬೆಳೆಯುತ್ತದೆ. ಕರ್ನಾಟಕದ ಉಡುಪಿ, ಚಿಕ್ಕಮಗಳೂರು, ಉತ್ತರಕನ್ನಡ, ಶಿವಮೊಗ್ಗ, ಕೊಡಗು ಜಿಲ್ಲೆಗಳ ಕಾನನ ಪ್ರದೇಶಗಳಲ್ಲಿ ಕಾಣಸಿಗುತ್ತದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ




## ಹೆಲ್ ಇಸ್ ರಿಯಲ್...

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಾಮಾನ್ಯವಾಗಿ ಅಪಘಾತ ತಡೆಯಲು, ಎಚ್ಚರಿಕೆ ಫಲಕಗಳನ್ನು ಅಳವಡಿಸುತ್ತಾರೆ. 'ಅಪಘಾತಕ್ಕೆ ಅವಸರವೇ ಕಾರಣ', 'ವೇಗದ ಮಿತಿ ನೆನಪಿರಲಿ' ಹೀಗೆ ಅನೇಕ ರೀತಿಯ ಫಲಕಗಳನ್ನು ನೋಡಿರುತ್ತೇವೆ. ಆದರೆ ಅಮೆರಿಕದ ಇಂಡಿಯಾನ ರಾಜ್ಯದ ಇಂಡಿಯಾನಾಪೋಲೀಸ್‌ಗೆ ಹೋಗುವ ಹೆದ್ದಾರಿಯಲ್ಲಿ 'ಹೆಲ್ ಈಸ್ ರಿಯಲ್' ಎಂಬ ಫಲಕ ಹಾಕಿದ್ದಾರೆ. ಈ ಫಲಕವು 'ಅಪಘಾತವಾದರೆ ಡೈರೆಕ್ಟ್ ಆಗಿ ನರಕಕ್ಕೇ ಹೋಗ್ತೀರಿ' ಎಂಬ ಸಂದೇಶ ಸಾರುತ್ತಿದೆ.

–ಬಿ. ಶೋಭಾ ಅರಸ, ಅರೆಬೈಲು



## ರಾಸು ಎತ್ತುವ ಯಂತ್ರ

ರೈತ ಸಮುದಾಯವು ಕಷ್ಟದ ಜೀವನ ನಡೆಸುತ್ತಲೇ ತಮ್ಮ ಬದುಕಿನ ಬಂಡಿಯನ್ನು ಎಳೆಯುವುದು ಮಾಮೂಲಿನ ಸಂಗತಿ. ರೈತರು ತಾವು ಬೆಳೆದ ಬೆಳೆಗೆ ಬೆಲೆ ಇಲ್ಲದ್ದ, ಮಾರುಕಟ್ಟೆಯಲ್ಲಾಗುವ ಮೋಸ, ಅತಿವೃಷ್ಟಿ ಅನಾವೃಷ್ಟಿಯಿಂದಾಗುವ ನಷ್ಟ, ರಾಸುಗಳಿಗೆ ಎರಗುವ ರೋಗರುಜಿನಗಳ ಬಾಧೆ ಮತ್ತಿತರೆ ಸಮಸ್ಯೆಗಳೆಲ್ಲವನ್ನೂ ಮೀರುವ ದೃಷ್ಟಿಯಿಂದ ಕೃಷಿ ಚಟುವಟಿಕೆ ಜೊತೆಗೆ ಉಪಕಸುಬುಗಳನ್ನು ಆಶ್ರಯಿಸುತ್ತಾ, ಬದುಕನ್ನು ಸಹನೀಯಗೊಳಿಸುತ್ತಾ ಸಾಗುವುದೇ ಸಕಾರಾತ್ಮಕ ಜೀವನ ವೈಖರಿಯಾಗಿದೆ.

ಅಂತಹ ಉಪಕಸುಬುಗಳಲ್ಲಿ ಇಂದು ಹೈನುಗಾರಿಕೆಯದ್ದೇ ಸಿಂಹಪಾಲು. ಆದರೆ, ಹೈನುಗಾರಿಕೆಯಲ್ಲಿ ಪ್ರಮುಖವಾಗಿ ರಾಸುಗಳ ಯೋಗಕ್ಷೇಮ, ಅವುಗಳಿಗೆ ಬರುವ ಕಾಯಿಲೆಗೆ ಚಿಕಿತ್ಸೆ, ನಿತ್ರಾಣಗೊಂಡ ರಾಸುಗಳ ಆರೈಕೆ ಮಾಡಲು ರಾಸುಗಳ ದೈತ್ಯದೇಹದ್ದೇ ಸಮಸ್ಯೆ. ಅಂತಹ ಸಮಸ್ಯೆಗೊಂದು ಪರಿಹಾರವಾಗಿ ಈ 'ರಾಸು ಎತ್ತುವ ಯಂತ್ರ'ವು ಬಂದಿದೆ. ಇದೀಗ ಮಂಡ್ಯ, ರಾಮನಗರ, ಹಾಸನ, ಮೈಸೂರು ಜಿಲ್ಲೆಯಾದ್ಯಂತ ನಿತ್ರಾಣಗೊಂಡ, ಗರ್ಭಧರಿಸಿದ, ನಡೆಯಲಾಗದ, ಮೇಲೆ ಏಳಲಾಗದ ರಾಸುಗಳನ್ನು ವ್ಯಕ್ತಿಯೊಬ್ಬ ಸುಲಭವಾಗಿ ಮೇಲೆತ್ತಿ, ರಾಸುಗಳ ಆರೈಕೆಯನ್ನು ಸಲೀಸಾಗಿ ನಡೆಸಬಹುದಾದಷ್ಟು ರೈತಸ್ನೇಹಿ ಯಂತ್ರವಾಗಿದೆ.

–ಹನಿಯೂರು ಚಂದ್ರೇಗೌಡ, ಬೆಂಗಳೂರು

